2) ಹೊನ್ನಾಳಿ – ಬೈಂದೂರು ಹೆದ್ದಾರಿಯಲ್ಲಿರು 2 ಸೇತುವೆಗಳು ಕುಸಿದಿರುವ ಬಗ್ಗೆ

ಶ್ರೀ ಹೆಚ್.ಹಾಲಪ್ಪ (ಹೊಸನಗರ) : ಸನ್ಮಾನ್ಯ ಅಧ್ಯಕ್ಷರೇ, ನನ್ನ ಮತ ಕ್ಷೇತ್ರದಲ್ಲಿ ಹಾದು ಹೋಗುವಂಥ ಹೊನ್ನಾಳಿ ಬೇಂದೂರು ರಾಜ್ಯ ಹೆದ್ದಾರಿಯಲ್ಲಿ ಎರಡು ಸೇತವೆಗಳು ಕುಸಿದು ಬಿದ್ದು ಜನ ಸಂಪರ್ಕಕ್ಕೆ ತೊಂದರೆಯಾಗಿದೆ. ತೀವ್ರ ಮಳೆಗಾಲವಾಗಿರುವುದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆಯಾಗಿದೆ. ಅಲ್ಲಿ ಪಕ್ಷಾತೀತವಾಗಿ ಎಲ್ಲಾ ಸಂಘ ಸಂಸ್ಥೆಯವರು ನಮ್ಮೊಂದಿಗೆ ಕೂಡಲೇ ಸರ್ಕಾರ ಸ್ಪಂದಿಸಿ ಏನಾದರೂ ವ್ಯವಸ್ಥೆಯನ್ನ ಮಾಡಬೇಕೆಂದು, ಸಂಪರ್ಕವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಸ್ಟ್ರೈಕ್, ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಆದ್ದರಿಂದ ತಾವು ಸರ್ಕಾರದವರು ಕೂಡಲೇ ಆ ಸ್ಥಳಕ್ಕೆ ಅಧಿಕಾರಿಗಳನ್ನು ಕಳುಹಿಸಬೇಕು. ಈ ಜನರಿಗೆ, ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಏನು ತೊಂದರೆಯಾಗಿದೆ, ಇದರ ಬಗ್ಗೆ ತುರ್ತುಕ್ರಮ ಕೈಗೊಳ್ಳಬೇಕೆಂದು ಈ ಶೂನ್ಯವೇಳೆಯಲ್ಲಿ ನಾನು ಸರ್ಕಾರದ ಗಮನಕ್ಕೆ ತರುತ್ತೇನೆ.

ಆ ಭಾಗದಲ್ಲಿ ಕಳೆದ 15 ದಿವಸಗಳಿಂದ ವಿದ್ಯುತ್ ಇಲ್ಲ, ವಿದ್ಯುತ್ ಕಂಬಗಳು ಮುರಿದು ಹೋಗಿವೆ, ಅದನ್ನು ಸಾಗಿಸಲಿಕ್ಕೂ ಆಗುತ್ತಿಲ್ಲ. ಕಳೆದ ವರ್ಷ ಹಾಕಿದಂಥ ಒಂದು ಕಾಲಸಂಕ ಇತ್ತು. ವಿದ್ಯಾರ್ಥಿಗಳು, ಸಾರ್ವಜನಿಕರು ಆ ಕಡೆ ಈ ಕಡೆ ದಾಟಲಿಕ್ಕೆ ತೆಪ್ಪದ ಮೇಲೆ ದಾಟುತ್ತಿದ್ದಾರೆ. ಶರಾವತಿಯ ಹಿನ್ನೀರು ಬರುತ್ತದೆ. ತೆಪ್ಪದ ಮೇಲೆ ದಾಟಲಿಕ್ಕೆ ವಿದ್ಯಾರ್ಥಿಗಳಿಗೆಲ್ಲಾ ಬಹಳ ತೊಂದರೆಯಿತ್ತು. ಆ ಕಾಲಸಂಕವನ್ನು ಸಹ ಸೇತುವೆಯನ್ನು ಕಟ್ಟುತ್ತೇವೆಂದು ಹೇಳಿ ಅದನ್ನು ತೆಗೆದುಹಾಕಿದ್ದಾರೆ, ಈಗ ಆ ಹಿನ್ನೀರು ನಿಂತಿರುವುದರಿಂದ ಆ ಸೇತುವೆಯನ್ನು ಕಟ್ಟಲಿಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿ ಈ ಸದನದ ಮೂಲಕ ತಿಳಿಸಬೇಕು ಮತ್ತು ಈ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು, ಆ ಸ್ಥಳಕ್ಕೆ ಅಧಿಕಾರಿಗಳ ತಂಡವನ್ನು ಕಳುಹಿಸಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವಂಥ ವಿಚಾರವಾಗಿದೆ. ಅದಕ್ಕಾಗಿ ನಾನು ತಮಗೆ ಪತ್ರವನ್ನು ಕಳುಹಿಸಿದೆ.

ಅಧ್ಯಕ್ಷರು : ನೀವು ಕೇಳಿಬಿಡಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಹಾಲಪ್ಪನವರು ಎತ್ತಿರುವುದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಮೊನ್ನೆ ದಿವಸ ಕೂಡ ಅತಿವೃಷ್ಟಿ ವಿಚಾರದಲ್ಲಿ ಮಾತನಾಡಬೇಕಾದ ಸಂದರ್ಭದಲ್ಲಿ ಹೇಳಿದೆ. ನಗರದಿಂದ ಕೊಲ್ಲೂರಿಗೆ ಹೋಗುವಂಥ ಬಹಳ ಪ್ರಮುಖವಾದಂಥ ರಾಜ್ಯ ಹೆದ್ದಾರಿಯ ಸೇತುವೆಯದು. ಕಳೆದ ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ಬಿದ್ದುಹೋಗಿರುವಂಥ ಬ್ರಿಡ್ಜ್ ಅದು. ಸಾಕಷ್ಟು ಒತ್ತಾಯ ಮಾಡಿದ ನಂತರ ಏಪ್ರಿಲ್ ತಿಂಗಳಿನಲ್ಲಿ ಕೆ.ಆರ್.ಡಿ.ಸಿ.ಎಲ್.ನಿಂದ ಅದಕ್ಕೆ ಮಂಜೂರಾತಿ ಸಿಕ್ಕಿತು. ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಬೇರೆ ಬೇರೆ ದೊಡ್ಡ ದೊಡ್ಡ ಕಂಪೆನಿ ಎಂದು ಹೇಳಿ ಸಾಕಷ್ಟು ಬ್ರಿಡ್ಜ್‌ಗಳನ್ನು ಕೊಟ್ಟಿದ್ದೇವೆ. ಅವರು ಕೆಲಸ ಮಾಡುವುದಿಲ್ಲ. ಏಕೆಂದರೆ ಅವರು ಸಿಮೆಂಟ್ ರೇಟ್ ಜಾಸ್ತಿಯಾದರೆ ಸಿಮೆಂಟ್ ರೇಟ್‌ನ ಮೇಲೆ ಏನು ಎಸ್.ಆರ್.ರೇಟ್ ಜಾಸ್ತಿಯಾಗಿದೆ, ಆ ಎಸ್.ಆರ್.ರೇಟ್ ಅನ್ನು ಸೇರಿಸಿಕೊಡುವಂತಹ ಒಂದು ಕಂಡೀಷನ್ ಮೇಲೆ ಕೊಟ್ಟಿರುತ್ತೇವೆ. ಹಾಗಾಗಿ ಅವರಿಗೆ ಕೊಟ್ಟಿರತಕ್ಕಂಥ ಯಾವುದೇ ಕೆಲಸವನ್ನು ನಮ್ಮ ಕ್ಷೇತ್ರದಲ್ಲಿ ಮಾಡಲಿಲ್ಲ. ಇವತ್ತು alternative ಏನೂ ಇಲ್ಲದೇ ರಾಜ್ಯ ಹೆದ್ದಾರಿ ನಿಂತು ಹೋಗಿದೆ ಎಂದರೆ ನಾವು ತಲೆ ತಗ್ಗಿಸಬೇಕಾಗಿದೆ, ನೀವೇನು ಕೆಲಸ ಮಾಡುವುದಿಲ್ಲ, ಶಾಸನಸಭೆಗೆ ಹೋಗುವುದಿಲ್ಲ, ಮಂತ್ರಿಗಳೊಂದಿಗೆ ಏನು ಮಾತನಾಡುವುದಿಲ್ಲ ವೆಂದು ಜನ ಇವತ್ತು ಚುನಾಯಿತ ಪ್ರತಿನಿಧಿಗಳಾಗಿರುವಂಥ ನಮ್ಮನ್ನು ಚುಚ್ಚುತ್ತಾರೆ. ನಾವು ಸಾಕಷ್ಟು ಪ್ರಯತ್ನ ಮಾಡಿದರೂ ಅವರು ಮಾಡುವುದಿಲ್ಲ. Alternative ಏನಾದರೂ ವ್ಯವಸ್ಥೆ ಮಾಡಿ, ಇಲ್ಲದೇಹೋದರೆ ನಮ್ಮ M.E.G. ಅಥವಾ ಯಾರಾದರೂ military ಯವರನ್ನು ಕರೆಸಿ ಒಂದು alternative ವ್ಯವಸ್ಥೆ ಮಾಡಿ. ಶರಾವತಿಯ ಹಿನ್ನೀರಿನ ಪ್ರದೇಶವದು. ಅಲ್ಲಿ ಕೃತಕವಾದ, ತಾತ್ಕಾಲಿಕವಾದ ಬ್ರಿಡ್ಜ್ ಅನ್ನು ನಿರ್ಮಾಣ ಮಾಡಬೇಕು. ಆ ಸೇತುವೆ ಆದ ಮೇಲೆ ಅದನ್ನು ತೆಗೆದು ಹಾಕಬಹುದಾಗಿದೆ. ಆ ರೀತಿಯಾಗಿ ಬೇರೆ ಬೇರೆ ಕಡೆ ಮಾಡಿದ್ದಾರೆ. ದಯವಿಟ್ಟು ಆ ಕೆಲಸವನ್ನು ತಾವು ಮಾಡಬೇಕು. ಹೊಸನಗರದ ತಾಲ್ಲೂಕಿನ ಅರ್ಧ ಹೋಬಳಿ. ಆ ಎರಡು ಹೋಬಳಿಗಳು ಡಿಲಿಂಕ್ ಆಗಿ ಹೋಗಿವಿ. ನಮ್ಮ ಕ್ಷೇತ್ರ ಹಾಗೂ ಹಾಲಪ್ಪನವರ ಕ್ಷೇತ್ರ ಎರಡೂ ಡಿಲಿಂಕ್ ಆಗಿದೆ, ಇಂತ ಒಂದು ದಯನೀಯವಾದ ಪರಿಸ್ಥಿತಿಯಲ್ಲಿ ಹಾಲಪ್ಪನವರ ಕ್ಷೇತ್ರ ಎರಡೂ ಡಿಲಿಂಕ್ ಆಗಿದೆ, ಇಂಥ ಒಂದು ದಯನೀಯವಾದ ಪರಿಸ್ಥಿತಿಯಲ್ಲಿ ಜನ ಬದುಕಿದ್ದಾರೆ. ವಿಶೇಷವಾಗಿ ನಕ್ಸಲೈಟ್ ಏರಿಯಾ ಅದು. ಇಷ್ಟೊಂದು ಸೂಕ್ಷ್ಮವಾಗಿರತಕ್ಕಂಥ ಪ್ರದೇಶದಲ್ಲಿ ಈ ರೀತಿ ಬಿಟ್ಟುಕೊಂಡು ಹೋಗುವುದು ಒಳ್ಳೆಯದಲ್ಲ. ದಯವಿಟ್ಟು ಸರ್ಕಾರ, ಮಾನ್ಯ ಲೋಕೋಪಯೋಗಿ ಸಚಿವರು

ತತ್‌ಕ್ಷಣ alternative ವ್ಯವಸ್ಥೆ ಮಾಡಬೇಕು. ವಾಹನಗಳು ಅಲ್ಲಿ ಪಕ್ಕದಲ್ಲಿ ಓಡಾಡುವ ಹಾಗೆ ವ್ಯವಸ್ಥೆಯನ್ನು ತಾವು ಮಾಡಬೇಕಾಗಿ ವಿನಂತಿ.

ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ಲೋಕೋಪಯೋಗಿ ಸಚಿವರು): ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರನ್ನು ಆ ಸ್ಥಳಕ್ಕೆ ಕಳುಹಿಸಿದ್ದೇವೆ. ನಮ್ಮ ಆರಗ ಜ್ಞಾನೇಂದ್ರರವರು ಹೇಳಿದ ಹಾಗೆ ರಸ್ತೆ ನಿಗಮದಲ್ಲಿ ಬ್ರಿಡ್ಜ್ ಅನ್ನು ತೆಗೆದುಕೊಂಡರೂ ಅವರನ್ನು ಕೇಳಿಯೇ ಮಾಡಿರುವುದು. ಅವರು ಯಾವುದನ್ನು ಹೇಳಿದ್ದರೂ ಅವರ ಪ್ರಯಾರಿಟಿ ಪ್ರಕಾರ ಅವರ ತಾಲ್ಲೂಕಿನಲ್ಲಿ ಕೊಟ್ಟಿದ್ದೇನೆ. ಆದ್ದರಿಂದ ಆ ಸಮಯದಲ್ಲಿ ಇದನ್ನೇ ಪ್ರಯಾರಿಟಿಯಾಗಿ ಕೊಟ್ಟಿದ್ದಿದ್ದರೆ ನನ್ನದೇನೂ ಅಭ್ಯಂತರವಿರಲಿಲ್ಲ, ನಾನು ಮಾಡುತ್ತಿದ್ದೆ. ಆದರೆ ಆ ಬಗ್ಗೆ ವಿಷಯವೇನು ಎಂಬುದನ್ನು ತಿಳಿದುಕೊಳ್ಳುತ್ತೇನೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರನ್ನು ಆ ಸ್ಥಳಕ್ಕೆ ಕಳುಹಿಸಿದ್ದೇನೆ. ಯಾವರೀತಿಯಾಗಿ alternative ವ್ಯವಸ್ಥೆ ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಿ ಅದನ್ನು ಮಾಡಿಸಲಿಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಪಡುತ್ತೇನೆ.

ಅಧ್ಯಕ್ಷರು : ಆಯಿತು, ಸಚಿವರು ಹೇಳಿದ್ದಾರೆ ಬಿಡಿ. ಈಗ ನಿಯಮ 69ರ ಮೇಲೆ ಚರ್ಚೆ.

ಶ್ರೀ ದಿನೇಶ್ ಗುಂಡೂರಾವ್: ಅಧ್ಯಕ್ಷರೇ, ಒಂದೇ ನಿಮಿಷ, ನಾನು ಒಂದು ಹಕ್ಕುಚ್ಯುತಿಯನ್ನು ಮಂಡನೆ ಮಾಡಿದ್ದೇನೆ, ತಾವು ಅದಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ, ಅದನ್ನು ರೈಸ್ ಮಾಡಬೇಕಲ್ಲ.

ಅಧ್ಯಕ್ಷರು : ಅನಂತರ ಅದಕ್ಕೆ ಅವಕಾಶ ಕೊಡುತ್ತೇನೆ, ಇದಕ್ಕೆ ಮೊದಲು ಉತ್ತರ ಆಗಲಿ.

ಶ್ರೀ ದಿನೇಶ್ ಗುಂಡೂರಾವ್ : ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಗಂಭೀರವಾಗಿದೆ. ನಾನು ಯಾವಾಗ ಮಾತನಾಡಲಿ.

ಶ್ರೀ ಎಸ್.ಮಲ್ಲಿಕಾರ್ಜುನ್ ಖರ್ಗೆ: ನನಗೆ ನಿಯಮ 69ರಡಿ ಮಾತನಾಡಲಿಕ್ಕೆ ಇನ್ನೂ ಅವಕಾಶ ಸಿಕ್ಕಿಲ್ಲ, ನನ್ನ ಮಾತು ಆದ ನಂತರ ಅವರು ಉತ್ತರ ಕೊಡಲಿ.